ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ:1603/2018

ಚಾಸಾ:2 ಪ್ರಾಸಾ:2

ದಿನಾಂಕ: 02-02-2023

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ರೇಣುಕ |
| ತಂದೆಯ ಹೆಸರು | : | ಯಮುನಪ್ಪ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಮನೆ ಕೆಲಸ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು ಚಾಸಾ-1ರವರ ಮನೆಯಲ್ಲಿ ಮನೆ ಕೆಲಸಕ್ಕೆ ಹೋಗುತ್ತಿದ್ದೆ. ಸುಮಾರು 5 ವರ್ಷಗಳ ಹಿಂದೆ ನಾನು ಚಾಸಾ-1ರವರ ಮನೆಯಲ್ಲಿ ಕೆಲಸ ಮುಗಿಸಿ, ಅದೇ ದಿನ ನಾನು ಸಂಜೆ 4 ಗಂಟೆಗೆ ಭುಜಂಗ ಶೆಟ್ಟಿರವರ ಮನೆಯ ಕೆಲಸಕ್ಕೆ ಹೋಗಿದ್ದೆ. ಅವರ ಮನೆಯಲ್ಲಿ ಭುಜಂಗ ಶೆಟ್ಟಿರವರ ಹೆಂಡತಿ ರತ್ನಾ ಇದ್ದರು. ರಾಘುರವರ ಹೆಂಡತಿ ಸಹ ಇದುದ, ಅವರು ನನಗೆ ತಮ್ಮ ಮನೆಗೆ ಸಂಜೆ ಹೋಗಿ ದೀಪ ಹಾಕಿ ಬೀಗದ ಕೀಯನ್ನು ಚಪ್ಪಲಿ ಸ್ಟ್ಯಾಂಡ್ ಹತ್ತಿರ ಇಡಲು ಹೇಳಿರುತ್ತಾರೆ. ನಾನು ಸಂಜೆ 6-30-7 ಗಂಟೆ ಸಮಯದಲ್ಲಿ ನಾನು ಮನೆಗೆ ಹೋಗಿ ಬೀಗ ತೆಗೆದು ಹೊರಗಡೆಯ ದೀಪ ಹಾಕಿ ನಂತರ ಬೀಗದ ಕೀಯನ್ನು ಚಪ್ಪಲಿ ಸ್ಟ್ಯಾಂಡ್ ಹತ್ತಿರ ಇಟ್ಟು ಹೋಗಿರುತ್ತೇನೆ.

ಮಾರನೇ ದಿನ ಬೆಳಿಗ್ಗೆ 6 ಗಂಟೆಗೆ ಅವರು ಫೋನ್ ಮಾಡಿ ನಮ್ಮ ಮನೆ ಬಾಗಿಲು ಒಡೆದು ಕಳ್ಳತನವಾಗಿರುವುದಾಗಿ ತಿಳಿಸಿದ್ದು, ನಾನು ಅವರ ಮನೆಗೆ ಹೋಗಿರುತ್ತೇನೆ. ನಾನು ಮನೆಗೆ ಹೋಗಿ ನೋಡಿದಾಗ, ಮನೆಯ ಮುಂದಿನ ಬಾಗಿಲು ಒಡೆದಿದ್ದು, ಕಾರನ್ನು ಕಳ್ಳತನ ಮಾಡಿರುವುದು ಗೊತ್ತಾಗಿರುತ್ತದೆ. ಬೇರೆ ಏನು ಕಳ್ಳತನವಾಗಿದೆ ಎಂದು ನನಗೆ ಗೊತ್ತಿಲ್ಲ. ಕಳ್ಳತನವಾದ ದಿನ ಪೊಲೀಸರು ಬಂದು ಒಂದು ಸಹಿ ಮಾಡಲು ಹೇಳಿದ್ದು, ಮಾಡಿರುತ್ತೇನೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ23-11-2017 ರಂದು ಬೆಳಿಗ್ಗಿನ ಜಾವ 5 ಗಂಟೆಗೆ ಚಾಸಾ-1 ರವರುನನಗೆ ಫೋನ್ ಮಾಡಿ ನಿನ್ನೆ ನೀನು ಮನೆಗೆ ಬಂದು ಲೈಟ್ ಹಾಕಿ ಹೋಗುವಾಗ ಮನೆಯ ಎದುರು ಶೆಡ್ಡಿನಲ್ಲಿ ಕಾರು ಇತ್ತಾ ಎಂದು ಕೇಳಿದ್ದು ನಾನು ಹೌದು ಎಂದು ಹೇಳಿರುತ್ತೇನೆ ಎಂದರೆ ಸರಿ. ನಂತರ ಅವರು ಕಾರು ಇರುವುದಿಲ್ಲ ಎಂದು ತಿಳಿಸಿದ್ದು, ನಾನು ಬೆಳಿಗ್ಗೆ 6 ಗಂಟೆಗೆ ಚಾಸಾ-1 ರವರ ಮನೆಗೆ ಹೋಗಿ ನೋಡಿದ್ದು, ಮನೆಯ ಹೊರಗಿನ ಹಿಂದಿನ ಬಾಗಿಲಿನ 2 ಚಿಲಕ ಮುರಿದಿದ್ದು, ರೂಂನಲ್ಲಿ ಇದ್ದ ಬಟ್ಟೆ, ಕಾಗದ ಪತ್ರಗಳು ಚೆಲ್ಲಾಪಿಲ್ಲೆಯಾಗಿತ್ತು ಎಂದರೆ ಸರಿ. ಮನೆಯ ಒಳಗೆ ಇದ್ದ ಕಾರಿನ ಕೀ ಇರಲಿಲ್ಲ ಎಂದು ಚಾಸಾ-1 ರವರು ತಿಳಿಸಿದ್ದು, ಶೆಡ್ಡಿನಲ್ಲಿ ಕಾರು ಇರಲಿಲ್ಲ, ಯಾರೋ ಕಳ್ಳರು ರಾತ್ರಿ ಸಮಯದಲ್ಲಿ ಮನೆಯ ಹಿಂದಿನ ಬಾಗಿಲು ಮುರಿದು ಮನೆಯ ಒಳಗೆ ಪ್ರವೇಶಿಸಿ, ಮನೆಯ ಒಳಗೆ ಇಟ್ಟಿದ್ದ ಕಾರಿನ ಕೀ ತೆಗೆದು, ಕಾರ್ ಶೆಡ್ಡಿನಲ್ಲಿ ಇದ್ದ ಕಾರನ್ನು ಕಳುವು ಮಾಡಿರುತ್ತಾರೆ ಎಂದು ಪೊಲೀಸರಿಗೆ ಹೇಳಿರುತ್ತೇನೆ ಎಂದರೆ ಸರಿ.

ಚಾಸಾ-1 ರವರ ಮನೆಯಲ್ಲಿ ಕಳ್ಳತನವಾದ ಕಾರಿನ ನಂಬರ್ ಕೆಎ-20-ಜಡ್-2248 ಆಗಿದ್ದು, ಚಾಸಾ-1 ರವರು ಕುಂದಾಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಕಳ್ಳತನವಾಗಿದ್ದ ಕಾರನ್ನು ಭಟ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸರು ಪತ್ತೆ ಮಾಡಿದ್ದು, ಆ ಕಾರನ್ನು ಚಾಸಾ-1 ರವರು ನ್ಯಾಯಾಲಯದಿಂದ ಬಿಡಿಸಿಕೊಂಡಿದ್ದು, ನಾನು ಆ ಕಾರನ್ನು ನೋಡಿರುತ್ತೇನೆ ಎಂದು ಪೊಲೀಸರಿಗೆ ಹೇಳಿರುತ್ತೇನೆ ಎಂದರೆ ಸರಿ. 1 ನೇ ಆರೋಪಿಯನ್ನು ಕುಂದಾಪುರದ ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಇತರೆ ಆರೋಪಿಗಳಾದ ನಟರಾಜ್, ಮಾರೂಫ್ ಮತ್ತು ರಶೀದಿ ಅಲಿಯಾಸ್ ಮೊಹಿದ್ದೀನ್ ರವರೊಂದಿಗೆ ಸೇರಿ ದಿಃ 21-11-2017 ರಂದು ರಾತ್ರಿ ಕಳುವು ಮಾಡಿರುವುದಾಗಿ ನನಗೆ ತಿಳಿದಿರುತ್ತದೆ ಎಂದು ಪೊಲೀಸರಿಗೆ ಹೇಳಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ 1 ನೇ ಆರೋಪಿತರ ಪರ ವಕೀಲರಾದ ಶ್ರೀ ಕೆ ಎಂ ಐ ರವರಿಂದಃ</u>**

ನನಗೆ ಓದಲು ಬರೆಯಲು ಬರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ಪೊಲೀಸರು ಚಾಸಾ-1 ರವರ ಮನೆಯ ಹತ್ತಿರ ನನ್ನ ಸಹಿ ಪಡೆದಿರುತ್ತಾರೆ,

ಅದರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಆರೋಪಿಯನ್ನು ಬಂಧಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಮನೆಯಿಂದ ರಾಘುರವರ ಮನೆಗೆ 5 ನಿಮಿಷದ ದಾರಿ. ಆ ದಿನ ನಮ್ಮನ್ನು ರಾಘುರವರು ಫೋನ್ ಮಾಡಿ ಕರೆದಿರುತ್ತಾರೆ. ನನಗೆ 6 ಗಂಟೆಗೆ ಫೋನ್ ಮಾಡಿರುತ್ತಾರೆ, ನಾನು ಕೂಡಲೇ ಮನೆಗೆ ಹೋಗಿರುತ್ತೇನೆ. ಮನೆಯು ರಾ.ಹೆದ್ದಾರಿಯ ಬದಿಯಲ್ಲಿ ಇರುತ್ತದೆ. ಸದ್ರಿ ರಸ್ತೆ ನೂರಾರು ಜನರು ಓಡಾಡುವ ರಸ್ತೆಯಾಗಿರುತ್ತದೆ. ನಾನು ಹೋದಾಗ ಸುಮಾರು 50-100 ಜನರು ಸೇರಿದ್ದರು.

ಮನೆಯಲ್ಲೂ ಜನರು ಇದ್ದರು. ನಾನು ಮನೆಗೆ ದೀಪ ಹಾಕಿ ಹೋಗಿರುತ್ತೇನೆ, ಕಾರಿನ್ನು ನೋಡಿಲ್ಲ ಎಂದರೆ ಸರಿ. ಕಳ್ಳತನವಾದ ಬಗ್ಗೆ ರಾಘುರವರು ಹೇಳಿದ ನಂತರ ತಿಳಿದಿರುವುದನ್ನು ಹೊರತುಪಡಿಸಿ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನು ರಾಘುರವರ ಮನೆಯಲ್ಲಿ ಕೆಲಸಕ್ಕೆ ಹೋಗುತ್ತಿದ್ದುದರಿಂದ, ಅವರಿಗೆ ಸಹಾಯ ಮಾಡಲು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿ.

**<u>ಪಾಟೀ ಸವಾಲುಃ</u> 2ನೇ ಆರೋಪಿ ಪರ ವಕೀಲರು 1ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**